# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 978
2. ಸದಸ್ಯರ ಹೆಸರು : ಶ್ರೀ ಮುನಿರಾಜು ಗೌಡ ಪಿ.ಎಂ. (ವಿಧಾನಸಭೆಯಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 22.02.2024.
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | 2023-24ನೇ ಸಾಲಿನಲ್ಲಿ ಇಲಾಖಾವಾರು ಬಜೆಟ್ ನಿಗಧಿಯಾಗಿದ್ದ ಅನುದಾನವೆಷ್ಟು; | 2023-24ನೇ ಸಾಲಿನ ಆಯವ್ಯಯದಲ್ಲಿ ವಿವಿಧ ಇಲಾಖೆಗಳಿಗೆ ಇಲಾಖಾವಾರು ಒಟ್ಟು ರೂ. 3,27,747 ಕೋಟಿಗಳನ್ನು ಇಲಾಖಾವಾರು ನಿಗದಿಪಡಿಸಲಾಗಿದ್ದು ಅನುದಾನದ ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.<br>ಪ್ರಸ್ತುತ ಇರುವ ಲೆಕ್ಕ ಪದ್ಧತಿ ಅನ್ವಯ, ಮಹಾಲೇಖಪಾಲರ ಕಚೇರಿಯಲ್ಲಿ, ಸರ್ಕಾರದ ಅನುದಾನ ಮತ್ತು ಲೆಕ್ಕದ ವಿವರಗಳನ್ನು ಲೆಕ್ಕಶೀರ್ಷಿಕೆವಾರು ನಿರ್ವಹಿಸಲಾಗುತ್ತಿದೆ. ವಿವಿಧ ಇಲಾಖೆಗಳಲ್ಲಿ ಕಾರ್ಯಕ್ರಮ ಅನುಷ್ಠಾನಗೊಳಿಸಲು ಆಯವ್ಯಯದಲ್ಲಿ ಅಂದಾಜಿಸಿ ನಿಗದಿಪಡಿಸಲಾದ ಅನುದಾನವನ್ನು ಅಡಳಿತ ಇಲಾಖೆಗಳು ಯೋಜನೆಗಳನ್ನು ಅನುಷ್ಠಾನಗೊಳಿಸುವ ಕಚೇರಿಗಳಿಗೆ ನಿಗಧಿಪಡಿಸಿದ ಮೊತ್ತಕ್ಕೆ ಅನುಗುಣವಾಗಿ ಹಂಚಿಕೆ ಮಾಡಿಕೊಂಡು ಅನುದಾನದ ಬಿಡುಗಡೆಗೆ ಆದೇಶವನ್ನು ಹೊರಡಿಸಿ, ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತವೆ ಹಾಗೂ ವೆಚ್ಚವನ್ನು ಭರಿಸುತ್ತವೆ. |
| ಆ | 2023-24ರಲ್ಲಿ ಇಲಾಖಾವಾರು ಬಿಡುಗಡೆಯಾದ ಅನುದಾನವೆಷ್ಟು; | |
| ಇ | ಆರ್ಥಿಕ ವರ್ಷದ ಅಂತ್ಯಕ್ಕೆ ಕೆಲವೇ ತಿಂಗಳು ಬಾಕಿಯಿದ್ದರೂ ಹಲವು ಇಲಾಖೆಗಳಿಗೆ ನಿಗಧಿಪಡಿಸಿದಷ್ಟು ಅನುದಾನ ಬಿಡುಗಡೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | |
| ಈ | 2023-24ರ ಬಜೆಟ್‌ನಲ್ಲಿ ಇಲಾಖಾವಾರು ನಿಗಧಿಯಾದಷ್ಟು ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು? | ಆಯವ್ಯಯದಲ್ಲಿ ವಿವಿಧ ಇಲಾಖೆಗಳ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ಒದಗಿಸಲಾದ ಅನುದಾನವನ್ನು ಬಿಡುಗಡೆ ಮಾಡುವ ಪ್ರಕ್ರಿಯೆಯನ್ನು ವಿಕೇಂದ್ರೀಕರಣಗೊಳಿಸಲಾಗಿದ್ದು, ಮೊದಲ ಮೂರು ತ್ರೈಮಾಸಿಕದ ಅನುದಾನವನ್ನು ಬಿಡುಗಡೆ ಮಾಡುವುದಕ್ಕೆ ಸಂಬಂಧಿಸಿದಂತೆ ವಿವಿಧ ಇಲಾಖೆಯ ಕಾರ್ಯದರ್ಶಿಗಳಿಗೆ ಅಧಿಕಾರ ಪ್ರತ್ಯಾಯೋಜಿಸಲಾಗಿರುತ್ತದೆ. ಅದರನ್ವಯ ಸರ್ಕಾರದ ವಿವಿಧ ಹಂತಗಳಲ್ಲಿ ಅನುದಾನ ಬಿಡುಗಡೆಗೆ ಆದೇಶವನ್ನು ಹೊರಡಿಸಲಾಗುತ್ತದೆ. ಮೊದಲ ಮೂರು ತ್ರೈಮಾಸಿಕದಲ್ಲಿ ಬಿಡುಗಡೆಯಾದ ಅನುದಾನದ ಬಳಕೆಗೆ ಅನುಗುಣವಾಗಿ ಉಳಿಕೆ ಅನುದಾನ ಬಿಡುಗಡೆ ಮಾಡಲಾಗುತ್ತದೆ. ಉಳಿಕೆ ಅನುದಾನವನ್ನು ಆಯಾ ಇಲಾಖೆಗಳ ಅವಶ್ಯಕತೆಗನುಗುಣವಾಗಿ ಅಂತಿಮ |

| | | |
|---|---|---|
| | | ತ್ರೈಮಾಸಿಕದ ಬಿಡುಗಡೆ ಮಾಡಲಾಗುವುದು.<br>ಮುಂದುವರೆದು, ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಸಂಬಂಧಿಸಿದಂತೆ, ಕೇಂದ್ರ ಸರ್ಕಾರವು ಆಯಾ ಯೋಜನೆಗೆ ಬಿಡುಗಡೆ ಮಾಡಿದ ಅನುದಾನವನ್ನು ಅನುಸರಿಸಿ, ರಾಜ್ಯ ಸರ್ಕಾರವು ರಾಜ್ಯದ ಪಾಲನ್ನು ಬಿಡುಗಡೆ ಮಾಡುತ್ತದೆ. ಅದುದರಿಂದ, ಕೇಂದ್ರ ಪುರಸ್ಕೃತ ಯೋಜನೆಗಳ ವೆಚ್ಚ ಕಡಿಮೆ ಇರುತ್ತದೆ. |

ಸಂಖ್ಯೆ: ಆಇ 14 ಬಿಜಿಎಲ್ 2024

(ಸಿದ್ದರಾಮಯ್ಯ)

ಮುಖ್ಯಮಂತ್ರಿ

ಅನುಬಂಧ

**2023-24ನೇ ಸಾಲಿನ ಆಯವ್ಯಯದಲ್ಲಿ ವಿವಿಧ ಇಲಾಖೆಗಳಿಗೆ ನಿಗದಿಪಡಿಸಲಾದ ಅನುದಾನ ಹಾಗೂ ಲೆಕ್ಕದ ವಿವರಗಳು**

(ರೂ.ಕೋಟಿಗಳಲ್ಲಿ)

| ಕ್ರ.ಸಂ. | ಇಲಾಖೆ | 2023-24ನೇ ಸಾಲಿನ ಆಯವ್ಯಯ ಅಂದಾಜು | ಖಜಾನೆ ಲೆಕ್ಕ (05, ಫೆಬ್ರವರಿ 2024ರ ಅಂತ್ಯಕ್ಕೆ |
|---|---|---|---|
| 1 | ಕೃಷಿ | 4058.30 | 1812.59 |
| 2 | ತೋಟಗಾರಿಕೆ | 1281.38 | 796.65 |
| 3 | ರೇಷ್ಮೆ | 404.02 | 277.09 |
| 4 | ಪಶುಸಂಗೋಪನೆ | 2672.28 | 2187.58 |
| 5 | ಮೀನುಗಾರಿಕೆ | 272.59 | 179.27 |
| 6 | ಆರ್ಥಿಕ | 31855.59 | 23648.20 |
| 7 | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ | 1310.46 | 945.24 |
| 8 | ಇ – ಆಡಳಿತ (*) | 99.30 | -89.54 |
| 9 | ಒಳಾಡಳಿತ | 11224.33 | 8448.56 |
| 10 | ಸಾರಿಗೆ | 5213.63 | 3277.22 |
| 11 | ಮೂಲಭೂತ ಸೌಕರ್ಯ | 1038.56 | 794.07 |
| 12 | ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತಿ ರಾಜ್ | 17316.75 | 8164.41 |
| 13 | ಅರಣ್ಯ | 2118.12 | 1702.99 |
| 14 | ಪರಿಸರ ಮತ್ತು ಜೀವಶಾಸ್ತ್ರ | 13.21 | 7.57 |
| 15 | ಸಹಕಾರ | 2275.83 | 1372.83 |
| 16 | ಪರಿಶಿಷ್ಟ ಜಾತಿಗಳ ಕಲ್ಯಾಣ | 4300.47 | 3937.75 |
| 17 | ಪರಿಶೀಷ್ಠ ಪಂಗಡಗಳ ಕಲ್ಯಾಣ | 1520.28 | 1040.30 |
| 18 | ಹಿಂದುಳಿದ ವರ್ಗಗಳ ಕಲ್ಯಾಣ | 3050.40 | 2076.02 |
| 19 | ಅಲ್ಪಸಂಖ್ಯಾತರ ಕಲ್ಯಾಣ | 2101.20 | 1061.08 |
| 20 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 22745.05 | 15566.75 |
| 21 | ವಾರ್ತೆ | 109.31 | 98.22 |
| 22 | ಪ್ರವಾಸೋದ್ಯಮ | 381.03 | 131.95 |
| 23 | ಯುವಜನ ಸೇವೆಗಳು | 230.46 | 160.52 |
| 24 | ಆಹಾರ ಮತ್ತು ನಾಗರೀಕ ಸರಬರಾಜು | 10459.24 | 4942.59 |
| 25 | ಕಂದಾಯ | 14848.91 | 11918.00 |
| 26 | ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ | 237.22 | 124.12 |
| 27 | ಉನ್ನತ ಶಿಕ್ಷಣ | 5450.02 | 3777.36 |
| 28 | ಶಾಲಾ ಶಿಕ್ಷಣ ಮತ್ತು ಸಾಕ್ಷರತೆ | 27076.81 | 26354.01 |
| 29 | ಕೈಮಗ್ಗ ಮತ್ತು ಜವಳಿ | 367.45 | 196.93 |
| 30 | ಭಾರಿ ಮತ್ತು ಮಧ್ಯಮ ಕೈಗಾರಿಕೆ | 1177.65 | 814.56 |
| 31 | ಸಣ್ಣ ಕೈಗಾರಿಕೆ | 521.66 | 366.40 |
| 32 | ಗಣಿ | 85.19 | 53.61 |
| 33 | ನಗರಾಭಿವೃದ್ಧಿ | 15701.69 | 9870.62 |
| 34 | ವಸತಿ | 3393.00 | 1353.61 |
| 35 | ಲೋಕೋಪಯೋಗಿ | 9417.84 | 6458.22 |
| 36 | ಭಾರಿ ನೀರಾವರಿ | 16735.50 | 9069.11 |
| 37 | ಸಣ್ಣ ನೀರಾವರಿ | 2291.52 | 1419.25 |
| 38 | ವೈದ್ಯಕೀಯ ಶಿಕ್ಷಣ | 4445.74 | 3062.88 |
| 39 | ಆರೋಗ್ಯ | 9799.40 | 7124.01 |
| 40 | ಕಾರ್ಮಿಕ | 678.92 | 459.57 |
| 41 | ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ | 1561.14 | 1144.28 |
| 42 | ಇಂಧನ | 22772.52 | 15826.61 |
| 43 | ಕನ್ನಡ ಮತ್ತು ಸಂಸ್ಕೃತಿ | 249.51 | 126.90 |
| 44 | ಯೋಜನೆ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ | 3825.60 | 1144.32 |

| | | | |
|---|---|---|---|
| 45 | ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ | 2185.80 | 1607.14 |
| 46 | ಸಂಸದೀಯ ವ್ಯವಹಾರಗಳು | 404.10 | 338.45 |
| 47 | ಋಣ ಮೇಲುಸ್ತುವಾರಿ | 58467.67 | 45878.90 |
| | **ಒಟ್ಟು** | **327746.62** | **231028.79** |

(*) ವಜಾ ಮರುಪಾವತಿ-ಬಂಡವಾಳ ಹೂಡಿಕೆಗಾಗಿ ರಾಜ್ಯಗಳಿಗೆ ಕೇಂದ್ರದ ವಿಶೇಷ ನೆರವು